408

ಮೈಸೂರ ಗೆಜೆಟ್.

ಸಂ. 39.] ಸರಕಾರದಿಂದ ಪ್ರಸಿದ್ಧ ಆದ್ದು. [ನಂ. 22.

ಬೆಂಗಳೂರು, ಗುರುವಾರ, ಜೂನ್ ತಾ|| 2, ಸ|| 1904.

IIನ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಕಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ಸ್ ಇಲಾಖಾ.

ನೋಟಿಫಿಕೇಷನ್, ತಾರೀಖು ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—1904–1905ನೆ ಇಸವಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಸ್ಟ್ಸುಗಳ ಪಸಾರೆ ಜಿನಸಿಯ ಹಕ್ಕುದಾರಿಯನ್ನು ರೇಂಜ್ ಫಾರೆಸ್ಟ್ಸು ಆಫಿಸರುಗಳು ಈ ಕೆಳಗೆ ಕಾಣಿಸಿ ಇರುವ ಸ್ಥಳಗಳಲ್ಲಿಯು ಆಯಾಯ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ:—

ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ಸು ಆಫಿಸರವರ ಮುಂಜೂರಾತಿಗೆ ಒಳಪಟ್ಟು ಇರುತ್ತೆ. ಹರಾಜು ಆಯಾಯ ತಾರೀಖಿನ ಮಧ್ಯಾನ್ಹ 12 ಘಂಟೆಗೆ ಪುರು ಮಾಡಲ್ಪಡುವದು.

ನಂಬರ್.	ರೇಂಜ್.	ಸ್ಟೇಟ್ ಫಾರೆಸ್ಟ್ಸುಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಬೆಂಗಳೂರು ...	ಉಜನಿ, ಹುಲ್ಲಡಿ, ವಡಕ, ಬೇವರಟ್ಟು, ನಾದುಕನಹಳ್ಳಿ.	ದೊಡ್ಡಬಳ್ಳಾಪುರ ...	1ನೆ ಜುಲ್ಯೆ 1904.
		ರಾಗಿಹಳ್ಳಿ ಫಾರೆಸ್ಟ್ಸ ...	ಬನ್ನೇರಘಟ್ಟೆ	4ನೆ ಡಿಟೋ
		ಬಳನಕುಪ್ಪೆ ...		
		ತಮ್ಮನಾಯಕನಹಳ್ಳಿ ...		
2	ಕ್ಲೋಸ್‌ಪೇಟೆ ...	ಕುಂಬಳಗೋಡು ರಿಜರ್ವ್ ...	ಕ್ಲೋಸ್‌ಪೇಟೆ ರೇಂಜ್ ಫಾರೆಸ್ಟ್ಸು ಆಫೀಸು	8ನೆ ಡಿಟೋ
		ಹುಲತಾರು ...		
		ಮೂಕಳಿ ...		
		ತೆಂಗಿನಕಲ್ಲು ...		
		ಚಿಕ್ಕ ಮಂಣುಗುಡ್ಡೆ ...		
		ದೊಡ್ಡ ಮಂಣುಗುಡ್ಡೆ ...		
		ಅಕ್ಕಲ್ ...		
		ಸಾವನದುರ್ಗ ...	ನಾಯಕನಪಾಳ್ಯ ಫಾರೆಸ್ಟ್ಸು ಲಾಡ್ಜು, ಮೂಗಡಿ ತಾ ಲೂಕು	9ನೆ ಡಿಟೋ
		ಶಿದ್ಲೇದೇವರಬೆಟ್ಟ ...		
		ಅತ್ತಿಂಗೆರೆ ...		
3	ಕಾನಕಾನಹಳ್ಳಿ ...	ಬಿಳಕಲ್ ಫಾರೆಸ್ಟ್ಸ ...	ಕಾನಕಾನಹಳ್ಳಿ ರೇಂಜ್ ಫಾರೆಸ್ಟ್ಸು ಆಫೀಸಿ	11ನೆ ಡಿಟೋ
		ಬಾಣಂತಿಮಾರಿ ...		
		ಮುಗ್ಗೂರು ಫಾರೆಸ್ಟ್ಸ ...	ಕೋಡಿಹಳ್ಳಿ ಮುಸಾಫರ ಬಂಗ್ಲೆ	12ನೆ ಡಿಟೋ
		ಚಿಲಂದೂಡಿ ...	ಸಾತನೂರು ಮುಸಾಫರ ಬಂಗ್ಲೆ	13ನೆ ಡಿಟೋ
		ಬಸವನಬೆಟ್ಟ ...		
		ಕಬ್ಬಾಳು ...		

ಜೆನೆಸಿಯು ತರಶೀಲ್.

1. ಹುಣಸೇಹಣ್ಣು, 2. ಹೊಂಗೇಬೀಜ, 3. ಕಗ್ಗೇಕಾಯಿ, 4. ಗೋಂದು, 5. ಜೇನುತುಪ್ಪ, 6. ಜೇನುನೋಣ, 7. ಕುಲವಂಗು, 8. ಗೇರುಬೀಜ, 9. ಬ್ಯಾಲದಕಣ್ಣು, 10. ಕಲ್ಲುಹುವ್ವು, 11 ಚಾರಪುಪ್ಪು, 12. ತಾರೇಕಾಯಿ, 13. ಚಿಗಚೆಬೀಜ, 14. ಅಂಟುವಾಳದಕಾಯಿ, 15. ಕಾಡಹರಳು, 16. ಒೂರಗದ ಹಶ್ತಿ, 17. ಕಿರಿ ಈಚಲು, 18. ಮಾಗಳೆಬೇರು, 19. ಸೊಗದೇಬೇರು, 20. ಹಿಪ್ಪೆಬೀಜ, 21. ಕೊಂಬುಗಳು, 22. ಅಳಲೆಕಾಯಿ.

2. ಜಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಮೂರು ದರಖಾಸ್ತುದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಖಾಯಿದೆ ಉಂಟಾಗದಲ್ಲಿ ಈತನು ಭಾಗಿಯಾಗುವದಿಲ್ಲ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೇ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ಉಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ಮಾಡಲಾಗುತ್ತೆ.

4. ರೇಂಜ್ ಫಾರಸ್ಟ್ ಆಫಿಸರು ಯಾವದೊಂದು ಕಾರಣವನ್ನು ತಿಳಿಸದೇ ದರಖಾಸ್ತು ಮಂಜೂರ್ಮಾಡುವದಕ್ಕೆ ಆಗಲೀ ತಿರಸ್ಕರಿಸುವದಕ್ಕಾಗಲೀ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸ್ತುದಾರನು ಇನಾಂದಾರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

6. ದರಖಾಸ್ತುದಾರನಾಗಲಿ ಅಥವಾ ಅವನ ಆಳುಗಳೇ ಆಗಲಿ ಸದರಿ ಜೆನಸಿ ಜಮಾವಣೆ ನೆವದಮೇಲೆ ಯಾವ ಗಿಡಗಳನ್ನಾಗಲೀ ನಾಶಪಡಿಸಕೂಡದು.

7. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜೆನಸಿ ವಿನಃ ಇತರ ಯಾವ ಜೆನಸಿಯನ್ನೂ ಜಮಾಯಿಸಕೂಡದು.

8. ದರಖಾಸ್ತುದಾರನ ಏಜಂಟರುಗಳಾಗಲೀ ಅಥವಾ ಆಳುಗಳಾಗಲೀ ಪಸಾರೆ ಜೆನಸಿ ಜಮಾವಣೀ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೇ ಗುರಿಪಡಿಸಲಾಗುತ್ತೆ.

9. ದರಖಾಸ್ತುದಾರನು 1905ನೆ ಇಸವಿ ಏಪ್ರಿಲ್ ಅಖೈರು ವಳಗಾಗಿ ಎಲ್ಲಾ ಪಸಾರೆ ಜೆನಸೀಯನ್ನು ಸ್ಟೇಟ್ ಫಾರಸ್ಟ್ ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

10. ಸ್ಟೇಟ್ ಫಾರಸ್ಟಿಗೆ ದರಖಾಸ್ತುದಾರನ ಆಶ್ರದ್ಧೆಯಿಂದಲಾಗಲೀ ಅಥವಾ ಈತನ ಆಳುಗಳಿಂದಲಾಗಲೀ ಫಾರಸ್ಟಿಗೆ ಬೆಂಕಿ ಬಿತ್ತೆಂದು ಫಾರಸ್ಟ್ ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಅಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ.

11. ದರಖಾಸ್ತುದಾರನೇ ಆಗಲೀ ಅಥವಾ ಈತನ ನೌಕರರೇ ಆಗಲಿ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾನಂತರ ಸ್ಟೇಟ್ ಫಾರಸ್ಟಿನಲ್ಲಿ ಪ್ರವೇಶ ಮಾಡಕೂಡದು.

12. ಹರಾಜು ದರಖಾಸ್ತುದಾರನು ತನ್ನ ಕಂಟ್ರಾಕ್ಟು ಷರತ್ತುಗಳಿಗೆ ಬದ್ಧನಾಗಿದಲು ಖಾತರೀ ಬಗ್ಗೆ 50 ರೂಪಾಯಿಗಳನ್ನು ನಗದಾಗಿ ತೇವಣಿ ಇಡಬೇಕು. ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ವಿರೋಧವಾಗಿ ನಡದದ್ದೇ ಆದರೆ ಖಾತರೀ ಒಗ್ಗೆ ತೇವಣಿ ಒಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಮು ರೂಢಿಸಿಕೊಳ್ಳುವ ಹಕ್ಕು ಸಹ ರದ್ದು ಪಡಿಸಲಾಗುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 16ನೆ ಮೇ 1904.

ಇದರಿಂದ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟ್ ಗೋರೀಬಿದನೂರ್ ತಾಲ್ಲೂಕಿನ ತಂಗಡಿ ಮತ್ತು ಕಕ್ಕೆ ಚೆಕ್ಕೆ ಹರಾಜು ವಿಷಯವಾಗಿ 12—5—04ನೆ ತಾರೀಖು ಮೈಸೂರ್ ಗೆಜೆಟ್ಟಿನ 273ನೆ ಪುಟದಲ್ಲಿ ಘಾಯಿಷ್ ಮಾಡಿರತಕ್ಕ 8—5—04ನೆ ಮುತ್ತಂ 408ನೆ ನಂಬರ್ ಇಸ್ತಿಹಾರ್‌ನಾಮೆಗೆ ಈ ಬಾಬಿನ ಕಂಟ್ರಾಕ್ಟ್ ಪಡಿಯಲು ಇಚ್ಛೈಸುವರು ಗಮನ ಕೊಡಬೇಕು.

ಎಸ್. ಎ. ಬಾಪುರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 18ನೆ ಮೇ 1904ನೆ ಇಸವಿ.

ಮೈಸೂರು ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕುಗಳಲ್ಲಿರುವ ತಂಗಡಿ, ಕಕ್ಕೆ, ಸೋಪು ಮತ್ತು ಪಪ್ಪಳಿ ಚಕ್ಕೆ ಜಮಾವಣಿ ವಿಷಯದಲ್ಲಿ 12—5—04ನೆ ಮುರ್ತುಂ 19ನೆ ನಂಬರು ಮೈಸೂರು ಗೆಜೆಟ್ಟಿನ ಎರಡನೇ ಭಾಗದ 275—276ನೆ ಪುಟಗಳಲ್ಲಿ ಘಾಯಿಷ್ ಮಾಡಿರುವ 6—5—1904ನೆ ಮುರ್ತುಂ ನೋಟಿಫಿಕೇಷನ್ನನ್ನು ನೋಡಿ.

ನೋಟೀಸ್ಸು, ತಾರೀಖು 25—30ನೆ ಮೇ 1904ನೆ ಇಸವಿ. 913

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನ ಡಿಪೋಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಚವುಬೀನಾ ಸುಮಾರು ಮೊತ್ತವು ಆಯಾಯ ರೇಂಜು ಆಫೀಸರು ಯಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ :—

ಡಿಪೋ ಹೆಸರು.	ಹರಾಜು ತಾರೀಖು	ತಾಗದ ನಾಟುಗಳು.	ತಾಗದ ಜಂಟಿದಿಮ್ಮಿಗಳು.	ಮುನ್ನಾಜಾತಿ ನಾದ ಗಳು.	ಮುನ್ನಾಜಾತಿ ಜಂಟಿ ದಿಮ್ಮಿಗಳು.	ಜಂಗಲ ನಾಟುಗಳು.	ಜಂಗಲ ಜಂಟಿ ದಿಮ್ಮಿಗಳು.	ಹರಾಜು ನಡಿಸುವ ಆಫಿಸರ ಹೆಸರು.	ಪರಾ.
		ಸಲೆ ಅಡಿ	ಸಲೆ ಅಡಿ	ಸಲೆ ಅಡಿ	ಸಲೆ ಅಡಿ	ಸಲೆ ಅಡಿ	ಸಲೆ ಅಡಿ		
ಚಾಮರಾಜನಗರ	12—6—04	...	12	506	124	111	341	ಚಾಮರಾಜನಗರದ ರೇಂಜು ಆಫಿಸರವರು	ಹರಾಜಿನಲ್ಲಿ ಪಟ್ಟಣದವರು ಕರಾರು ಮಾಡಿಕೊಳ್ಳುವ ಪಕ್ಷದಲ್ಲಿ ಹರಾಜಿನ ದಿವಸದ ಸುಮಾರು ಒಂದು ವಾರದೊಳಗೆ ಹಣವನ್ನು ಸಂದಾಯ ಮಾಡಿ ಪರವಾನಗಿ ಪಡೆದುಕೊಳ್ಳಬೇಕು. ಹೊರಗಿನವರು ಹರಾಜಿನ ದಿವಸವೇ ಹಣ ಕೊಟ್ಟು ಪರವಾನಗಿ ಪಡೆದುಕೊಳ್ಳಬೇಕು.
ನಂತೆಮರಹಳ್ಳಿ ...	14—6—04	17	122	2,563	236	104	317		
ಹುಣಸೂರು	15—6—04	130	265	1,233	1,243	252	641	ಹುಣಸೂರು ರೇಂಜು ಆಫಿಸರವರು	
ಮೈಸೂರು ...	17—6—04	4,339	2,349	5,098	1,916	206	222	ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು	
ನಂಜನಗೂಡು ...	20—6—04	540	2,616	2,053	3,408	180	45		

ಇತರ ಷರತ್ತು—1895ನೆ ಇಸವಿ 25ನೆ ಏಪ್ರೆಲ್ 15ನೆ ನಂಬರು ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವ 1895ನೆ ಇಸವಿ ಮಾರ್ಚಿ 15ನೆ ವರ್ತಮಾನ 15229—R. F. 155-92ನೆ ನಂಬರು ಗವರ್ನಮೆಂಟು ನೋಟಿಫಿಕೇರ್ಷನ್ನೋಡಿ.

ಸಿ. ಅಪ್ಪಯ್ಯ, ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್, ಮೈಸೂರು.

ನೋಟಿಫಿಕೇರ್ಷ, ತಾರೀಖು 26ನೆ ಮಾಹೆ ಮೇ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತ್ರಿಳಿಯಪಡಿಸುವದೇನಂದರೆ, ಇದರಡಿ ನಮೂದಿರುವ ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ಡಿಪೋದಲ್ಲಿರುವ ಈ ಕೆಳಗೆ ಕಂಡ ಫಾರೆಸ್ಟ್ ಪಸಾರೇ ಜೆನಸುಗಳು ಅರಸೀಕೆರೆಯಲ್ಲಿ ಹಾಸನ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರಿಂದಲಾಗಲೀ ಅಥವಾ ಅವರಿಂದ ನೇಮಿಸಲ್ಪಡಬಹುದಾದ ಇತರ ಆಫಿಸರಿಂದಲಾಗಲೀ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ. ಹರಾಜು ತಾರೀಖು 17—6—1904.

ನಂಬರು.	ಪಸಾರೆ ಜೆನಸು ಹೆಸರು.	ಮೊತ್ತ.	ಪರಾ.
1	1902-03ನೆ ಸಾಲಿನ ಬಾಬತು ಅಳಲೇಕಾಯಿ.	ಸುಮಾರು 500 ಮಣ.	ಸ್ವಲ್ಪ ಹೆಚ್ಚು ಕಡಮೆ.
2	1903-04ನೆ ಸಾಲಿನ ಬಾಬತು ಅಳಲೇಕಾಯಿ.	430 ಪಲ್ಲ ಅಥವಾ ದರ ಪಲ್ಲ 1ಕ್ಕೆ 5 ಮಣವಿನಂತೆ 2,150 ಮಣ.	ಡಿಟೋ
3	ಹೊಂಗೇಬೀಜ ...	11 ಪಲ್ಲ 90 ಸೇರು.	
4	ಸೀಗೆಕಾಯಿ ...	ಸುಮಾರು 15 ಮಣ.	ಡಿಟೋ

ಹರಾಜು ಷರತ್ತು :—1895ನೆ ಇಸವಿ ಮಾರ್ಚಿ 15ರ ವರ್ತಮಾನ 1529—ಆರ್. ಎಫ್. 155-92ನೆ ನಂಬರು ಗವರ್ನಮೆಂಟ್ ನೋಟಿಫಿಕೇರ್ಷಗೆ ಅನುಗುಣವಾಗಿರತ್ತೆ.

ವೈ. ಸೀತಾರಾಮಯ್ಯ, ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಸ 1904ನೆ ಇಸವಿ ತಾರೀಖು

ಟಿ. ರಂಗರಾವ್‌ನಿಂದ ಸ 1903—04ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿ ಕಾಳೇನ ಅಗ್ರಹಾರವೆಂಬ ಕಾಯಂಗುತ್ತಾ ಪೂರಾ ಗ್ರಾಮವನ್ನು ಬೆಂಗಳೂರು ತಾಲ್ಲೂಕು ಖಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ರೂಬರೂಬು 1904ನೆ ಇಸವಿ ಜೂ ತಾರೀಖು 25ನೆ ಶನಿವಾರದ ದಿವಸ ದಿವಿ 11 ಘಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ತಪಸೀಲ್ 1904ನೆ ಇಸವಿ ಮೇ ತಾರೀಖು 19ನೆ ವರ್ತಮಾನ 20ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 299ನೆ ಪುಟದಲ್ಲಿ ಫಾಯಿಷ್ ಆಗಿರುತ್ತೆ.